**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 542/2018**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ18.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಅನೀಷ ಇಂಗಲಹಳ್ಳಿ |
| ತಂದೆಃ ಗಂಡನ ಹೆಸರು | ಮಹಬೂಬ್ ಸಾಬ್ |
| ಉದ್ಯೋಗ | ಆಟೋ ಚಾಲಕ |
| ವಯಸ್ಸು | 35 |
| ವಾಸಸ್ಥಳ | ಹುಬ್ಬಳ್ಳಿ |

**ಪ್ರಾರಂಭ ಸಮಯಃ 11.55 ಪಿ.ಎಂ.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ನನಗೆ ಚಾಸಾ.2, 6, 7, 8, 9 ಮತ್ತು 11 ಗೊತ್ತು. ಚಾಸಾ.3, 4 ಮತ್ತು 5 ಗೊತ್ತಿಲ್ಲ. ದಿಃ22.03.2018 ರಂದು ಸಂಜೆ 04.00 ಗಂಟೆ ಸಮಯದಲ್ಲಿ ಕೆ ಎ 25 ಇ ವೈ 3549 ದ್ವಿ ಚಕ್ರ ವಾಹನದಲ್ಲಿ ನನ್ನ ತಮ್ಮ ಕಲಘಟಗಿಯಿಂದ ಸಾತೋ ಶಹೀದ ದರ್ಗಾ ಕಡೆಗೆ ಹೋಗುತ್ತಿದ್ದಾಗ ಬಲಭಾಗಕ್ಕೆ ತಿರುವು ತೆಗೆದುಕೊಳ್ಳುವ ಸಂದರ್ಭದಲ್ಲಿ ಅಪಾದಿತನು ತನ್ನ ಗುಡ್ಸ್ ಟ್ರಕ ಸಂಖ್ಯೆ 8461 ನ್ನು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹಿಂದಿನಿಂದ ಅಪಘಾತ ಪಡಿಸಿರುತ್ತಾನೆ. ಸದರಿ ಅಪಘಾತದಲ್ಲಿ ತನ್ನ ತಮ್ಮನ ತಲೆಗೆ ಮತ್ತು ಹೊಟ್ಟೆಗೆ ಬಾರಿ ಪ್ರಮಾಣದ ಗಾಯಗಳಾಗಿತ್ತು. ಸದರಿ ವಿಚಾರವನ್ನು ನನಗೆ ಚಾಸಾ.7 ರವರು ತಿಳಿಸಿದರು. ನಂತರ ನಾನು ಘಟನಾ ಸ್ಥಳಕ್ಕೆ ಹೋದೆ. ಆ ಸಮಯದಲ್ಲಿ ನನ್ನ ತಮ್ಮ ರೋಡಿನ ಮೇಲೆ ಬಿದ್ದಿದ್ದ ನಂತರ ಆಂಬುಲೆನ್ಸ್ ನಲ್ಲಿ ನನ್ನ ತಮ್ಮನನ್ನು

ಕಲಘಟಗಿಯ ಕಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ನನ್ನ ತಮ್ಮ ಮರಣ ಹೊಂದಿರುತ್ತಾನೆ. ಸದರಿ ವಿಚಾರವಾಗಿ ನಾನು ಅಪಘಾತಪಡಿಸಿದಂತಹ ಅಪಾದಿತನ ವಿರುದ್ದ ಅದೇ ದಿನ ದೂರು ಕೊಟ್ಟಿರುತ್ತೇನೆ. ಸಾಕ್ಷಿಗೆ ದಿಃ 22.03.2018 ರ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಮಾರನೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ.2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿದರು ಮತ್ತು ಹಾಥ ನಕಾಶೆಯನ್ನು ಬರೆದರು ಮತ್ತು ಭಾವಚಿತ್ರಗಳನ್ನು ತೆಗೆದರು. ಸಾಕ್ಷಿಗೆ ದಿಃ 23.03.2018 ರ ಸ್ಥಳಪಂಚನಾಮೆ ಮತ್ತು ಹಾಥನಕಾಶೆಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ2 ಮತ್ತು 3 ಎಂದು, ಅವುಗಳಲ್ಲಿರುವ ತನ್ನ ಸಹಿಯನ್ನು ನಿಪಿ2(ಎ) ಮತ್ತು 3(ಎ)ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆಪಾದಿತನ ಪರ ವಕೀಲರಾದ ಶ್ರೀ ಆರ ಐ ಕೆ ರವರಿಂದ**

ಚಾಸಾ.2, 8, 9 ಮತ್ತು 11 ನನ್ನ ಸಂಬಂಧಿಕರು ಅಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನಾನು ಖುದ್ದಾಗಿ ನೋಡಿಲ್ಲ. ಅಪಘಾತವಾದಾಗ ನಾನು ಕಲಘಟಗಿಯಲ್ಲಿ ಇದ್ದೆ. ನನಗೆ ಅಪಘಾತದ ವಿಚಾರವನ್ನು ತಿಳಿಸಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ನಾನು ಅಪಾದಿತನ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ನಾನು ಪೊಲೀಸರಿಗೆ ಘಟನ ಸ್ಥಳವನ್ನು ತೋರಿಸಿದ್ದೆ ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಿಪಿ2 ಮತ್ತು 3 ನ್ನು ಬರೆಯಲಾಯಿತು ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ನನ್ನ ತಮ್ಮ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುವ ಸಮಯದಲ್ಲಿ ಮರಣ ಹೊಂದಿದರು ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಅಪಾದಿತನು ಯಾವುದೇ ಅಪಘಾತ ಮಾಡಿಲ್ಲ ಅಂದರೆ ಸರಿಯಲ್ಲ. ಕೇವಲ ವಿಮಾ ಸೌಲಭ್ಯವನ್ನು ಪಡೆಯುವ ಒಂದೇ ದುರುದ್ದೇಶದಿಂದ ಅಪಾದಿತನ ವಿರುದ್ದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಾ**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**